ಕೆ.ವಿ. ಸುಬ್ರಹ್ಮಣ್ಯಂ

# ಅನನ್ಯ ದ್ರಾವಿಡ ದೃಶ್ಯಧ್ಯಾನ ಜೆ.ಎಂ.ಎಸ್. ಮಣಿ

ಇತ್ತೀಚೆಗೆ ನಿಧನರಾದ (03–06–2021) ಕಲಾವಿದ ಜೆ.ಎಂ.ಎಸ್. ಮಣಿ (72) ತಮ್ಮ ವಿಶಿಷ್ಟ ಕಲಾಕೃತಿಗಳಿಂದ ಚಿತ್ರರಸಿಕರ ಮನದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಬೆಂಗಳೂರಿನ ಕೆನ್ ಕಲಾಶಾಲೆಯ ಮೂಲಕ ಅಪಾರ ಸಂಖ್ಯೆಯ ಕಲಾವಿದರನ್ನು ಬೆಳೆಸಿದ ಅವರ ಕುರಿತ ನುಡಿಚಿತ್ರ ಇಲ್ಲಿದೆ.

ಕನ್ನಡ ದೃಶ್ಯಕಲಾರಂಗದ ಇತಿಹಾಸವು ವೈವಿಧ್ಯಮಯವಾಗಿದೆ, ವೈಶಿಷ್ಟ್ಯಮಯ ಮತ್ತು ವೈರುಧ್ಯಮಯವೂ ಆಗಿದೆ. ಹೀಗಾಗಿಯೇ ಪರಸ್ಪರ ಹೋಲಿಸಲಾಗದ ನಮ್ಮ ಪೂರ್ವಸೂರಿ ಕಲಾಚೇತನಗಳನ್ನು ನಾವು ನೋಡುತ್ತೇವೆ. ದಿಗ್ಗಜ ಕಲಾವಿದರು ಕ್ಲಾಸಿಕಲ್ ಕಲಿಕೆಯ ಹಾದಿಗಳಲ್ಲಿ ಅಡ್ಡಾಡಿ, ಅಂತಿಮವಾಗಿ ವ್ಯಾಕರಣ ಮೀರುವ, ಕಲಿತದ್ದನ್ನು ಮರೆತು ನಿರಚಿಸುವ ನಡೆಗಳತ್ತ ಹೊರಳುತ್ತಾರೆ. ಅಪರೂಪಕ್ಕೆ ಮತ್ತೆ ಕೆಲವರು ಕಲಾಸೃಷ್ಟಿಗೆ ತೀವ್ರ ಕಲಿಕೆಯ ಹಂಗು ಬೇಕಿಲ್ಲ ಎಂಬುವುದನ್ನು ಸಾಧಿಸಿ ತೋರುವಂತೆ, ಕಲಾವ್ಯಾಕರಣ ಮೀರಿ, ಅವರದೇ ಆದ ಸ್ವಚ್ಛಂದ ಛಂದಸ್ಸಿನಂತಹ ಹಾದಿಗಳಲ್ಲಿ ನಡೆದಾಡಿಯೂ ಈ ಪುಟಗಳನ್ನು ತುಂಬಿದ್ದಾರೆ. ಇಷ್ಟದ ಪ್ರವೃತ್ತಿಯನ್ನು ಕಷ್ಟ ಸಹಿಸಿ, ತಮ್ಮ ಪ್ರತಿಭೆಯಿಂದ ಸಾಧಿಸಿದ್ದಾರೆ. ಇಂತಹವರ ಸಾಲಿಗೆ ಹೊಸ ಸೇರ್ಪಡೆ ಜೆ.ಎಂ.ಎಸ್. ಮಣಿ. ಬೆಂಗಳೂರಿನ ಶ್ರೀ ರಾಮಪುರದಲ್ಲಿ ಬೆಳೆದ ಅವರು ಕಲಾವಿದ ಆರ್.ಎಂ. ಹಡಪದರ ಕಣ್ಣಿಗೆ ಬಿದ್ದು, ಅವರ ಆಶ್ರಯಕ್ಕೆ ಬಂದರು. ಕಡು ಬಡತನದ ಬೆಂಕಿಯಲ್ಲಿ, ಹಸಿವಿನಿಂದ ಬಳಲಿದ್ದ ಮಣಿ, ಕೆನ್ ಕಲಾಶಾಲೆಯಲ್ಲಿ ಕಲೆಯ ಹಸಿವಿನಲ್ಲಿ ಕಲಾವಿದನಾಗಿ ಬೆಳೆದರು. ಕೆನ್ ಕಲಾಶಾಲೆ ಎಂದರೇನೇ